


## ನಕಲಿ ಹವಳ ಪತ್ತೆ ಹೇಗೆ?

ಈಗೀಗ ನಕಲಿ ಹವಳದ್ದೇ ಹಾವಳಿ. ವಿವಿಧ ಆಕಾರದ ಮಣಿಗಳಿಗೆ ಕೆಂಪು, ಕಿತ್ತಳೆ ಬಣ್ಣ ನೀಡಿ ದುಬಾರಿ ಹಣ ಕೀಳುವ ಪರಿಪಾಟ ಹೆಚ್ಚಾಗಿದೆ. ಹವಳ ನಕಲಿಯೋ ಅಥವಾ ಅಸಲಿಯೋ ಎಂದು ಪತ್ತೆ ಹಚ್ಚಬೇಕಾದರೆ ಹವಳದ ಮೇಲೆ ಒಂದೆರಡು ಹನಿ ನಿಂಬೆರಸ ಹಾಕಿದರೆ ಅದರಲ್ಲಿರುವ ಕ್ಯಾಲ್ಸಿಯಂ ಕರಗಿ ಸಣ್ಣಸಣ್ಣ ಗುಳ್ಳೆ ಬರುತ್ತದೆ. ಇದನ್ನು ಅಸಲಿ ಎಂದು ತಿಳಿಯಬೇಕು. ನಕಲಿಯಾದರೆ ಹವಳಮಣಿಯ ಮೇಲ್ಮೈ ನಯವಾಗಿ ಇರುತ್ತದೆ.

ಭಾರತೀಯರಷ್ಟೇ ಏಕೆ, ಈಜಿಪ್ಟ್, ರೋಮನ್, ಆಫ್ರಿಕಾ ದೇಶಗಳಲ್ಲಿ ಮಹಿಳೆಯರು ಇಷ್ಟಪಡುವುದು ಹವಳದ ಒಡವೆಗಳನ್ನೇ. ದಪ್ಪ ದಪ್ಪ ಕೆಂಪು, ಕಿತ್ತಳೆ ಬಣ್ಣದ ಹವಳದ ಸರ, ಬ್ರೇಸ್ಲೆಟ್, ಕಿವಿಯೋಲೆ, ಬಳೆಗಳನ್ನು ಧರಿಸುವುದೆಂದರೆ ಮಹಿಳೆಯರಿಗೆ ಎಲ್ಲಿಲ್ಲದ ಖುಷಿ. ಬರೀ ಚಿನ್ನದಲ್ಲಿ ಪೋಣಿಸಿದ ಹವಳದ ಒಡವೆ ಮಾತ್ರವಲ್ಲ, ನೂಲಿನಿಂದ ಪೋಣಿಸಿದ ಹವಳದ ಆಭರಣವೂ ವಧುವಿನ ಕೈ, ಕತ್ತನ್ನು ಅಲಂಕರಿಸುತ್ತದೆ. ನಮ್ಮ ದೇಶದ ಈಶಾನ್ಯ ರಾಜ್ಯಗಳ ಬುಡಕಟ್ಟು ಮಹಿಳೆಯರು ಹವಳದ ಮಣಿಗಳನ್ನು ದಾರದಲ್ಲಿ ಪೋಣಿಸಿ ಧರಿಸುತ್ತಾರೆ.

### ಏನಿದು ಹವಳ?

ಹವಳ ಎಂದರೆ ಅದು ಥಳ ಥಳ ಹೊಳೆಯುವ ಹರಳಲ್ಲ. ಆಂಗ್ಲ ಭಾಷೆಯಲ್ಲಿ ಕೋರಲ್ ಎಂದು ಕರೆಯುವ ಈ ಹವಳ, ಪಾಲಿಪ್ ಎಂಬ ಪುಟ್ಟ ಜೀವಿಯ ಬುಡದಲ್ಲಿರುವ ಸುಣ್ಣದ ಕಲ್ಲನ್ನು (ಕ್ಯಾಲ್ಸಿಯಂ ಕಾರ್ಬೊನೇಟ್) ಹೊಂದಿರುವ ಕವಚ. ವೈಜ್ಞಾನಿಕವಾಗಿ 'ಅಂತೋಜೋವ' ಎಂದು ಕರೆಯಲಾಗುತ್ತದೆ. ಕಡಲಾಳದಲ್ಲಿ ಬಂಡೆಗಲ್ಲಿಗೆ ಅಂಟಿಕೊಂಡು ಬೆಳೆಯುವ ಈ ಜೀವಿ ಒಂಟಿತನ ಬಯಸದೆ ಹಲವಾರು ಜೀವಿಗಳು ಒಟ್ಟಿಗೇ ಬೆಳೆಯುತ್ತವೆ. ನೂರಾರು ವರ್ಷ ಒಂದೇ ಕಡೆ ಬೆಳೆಯುತ್ತಾ ಹೋಗುತ್ತದೆ. ಇದೊಂದು ರೀತಿಯ ದಿಬ್ಬವಾಗಿ ಮಾರ್ಪಾಡಾಗುತ್ತದೆ. ಇದನ್ನೇ ಹವಳದ ದಿಬ್ಬ (ಕೋರಲ್ ರೀಫ್) ಎಂದು ಕರೆಯುವುದು. ಸಮುದ್ರ ತಳದಲ್ಲಿರುವ ಸಣ್ಣಪುಟ್ಟ ಜೀವಿಗಳೇ ಈ ಹವಳ ಜೀವಿಯ ಆಹಾರ.

'ಹವಳದ ದಿಬ್ಬವನ್ನೇ ತುಂಡು ತುಂಡಾಗಿ ಕತ್ತರಿಸಿ ತಂದು ಒಡವೆ ಮಾಡಲಾಗುತ್ತದೆ. ಹವಳ ಹಳೆಯದಾದಷ್ಟು ಬೆಲೆ ಹೆಚ್ಚು. ಕಡುಕಿತ್ತಳೆ ಬಣ್ಣದ ಹವಳ ಹೆಚ್ಚು ಜನಪ್ರಿಯವಾಗಿದ್ದರೂ ಕೆಂಪು, ಗುಲಾಬಿ, ಬಿಳಿ ಬಣ್ಣದ ಹವಳಗಳೂ ಸಮುದ್ರದಾಳದಲ್ಲಿ ಲಭ್ಯ. ಗುಲಾಬಿ ಮಿಶ್ರಿತ ಕೆಂಪು, ಕಡುಗೆಂಪು ಬಣ್ಣದ ಹವಳ ಬಹಳ ಜನಪ್ರಿಯ. ಕತ್ತರಿಸುವಾಗ ಮೃದುವಾಗಿರುವ ಈ ಹವಳವನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ಒಡವೆ ತಯಾರಿಸಲಾಗುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಆಭರಣ ವರ್ತಕ ಚಂದನ್ ಲಾಲ್.

ಕೆಂಪು ಬಣ್ಣದ ಹವಳದ ಬಣ್ಣ ಎಂದಿಗೂ ಮಾಸುವುದಿಲ್ಲ. ಇದನ್ನು ಚಿನ್ನದ ಒಡವೆಗಳಲ್ಲಿ ಹೆಚ್ಚಾಗಿ ಬಳಸುತ್ತೇವೆ. ಉತ್ತರ ಭಾರತೀಯರು



ಇದನ್ನು ಇಷ್ಟಪಟ್ಟು ಖರೀದಿಸಿ ಧರಿಸುತ್ತಾರೆ, ಇದನ್ನು ಅದೃಷ್ಟದ ಸಂಕೇತ ಎಂದೇ ಅವರು ಭಾವಿಸುತ್ತಾರೆ. ಕೆಂಪು ಹವಳವನ್ನು ನೆಕ್ಲೇಸ್, ಬಳೆ, ಕಿವಿಯೋಲೆ, ಉಂಗುರ ತಯಾರಿಸಲು ಬಳಸುತ್ತೇವೆ' ಎಂದು ವಿವರ ನೀಡುತ್ತಾರೆ ಅವರು.

'ಕೆಂಪು ಮತ್ತು ಗುಲಾಬಿ ಬಣ್ಣದ ಹವಳವನ್ನು ಚಿನ್ನದ ಸರಿಗೆಯಲ್ಲಿ ಪೋಣಿಸಿ ಮಾಡಿದ ಆಭರಣಕ್ಕೆ ಹೆಚ್ಚು ಬೇಡಿಕೆ ಇದೆ. ಇದನ್ನು 22 ಕ್ಯಾರಟ್ ಚಿನ್ನದಲ್ಲಿ ಮಾಡಲಾಗುತ್ತದೆ. ಉದ್ದನೆಯ ಹಾರ, ಎರಡೆಳೆಯ ಸರ ಹೆಚ್ಚು ಜನಪ್ರಿಯ. ಕೆಂಪು ಹವಳದ ಚೋಕರ್ ಅನ್ನೂ ಮಾಡರ್ನ್ ಹುಡುಗಿಯರು ಇಷ್ಟಪಡುತ್ತಾರೆ. ಉದ್ದದ ಹಾರಕ್ಕೆ ಆ್ಯಂಟಿಕ್ ಪೆಂಡೆಂಟ್ ಸೇರಿಸಿದರೆ ಸಖತ್ ಲುಕ್ ಕೊಡುತ್ತದೆ' ಎಂದು ಆಭರಣದ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತಾರೆ ಅವರು.

'ಅಜ್ಜಿಯರ ಕಾಲದ ಗೆಜ್ಜೆಮಾಲಾಕ್‌ನಲ್ಲೂ ಹವಳದ ಛಾಪು ಇದೆ. ಕಿತ್ತಳೆ ರಂಗಿನ ಕಿವಿಯೋಲೆ ನೋಡಲು ಚಂದ. ಹವಳದ ಪಾಟಲಿಗಳು ಇಂದಿಗೂ ಜನಪ್ರಿಯ. ಅಪ್ಪಟ ಹವಳದ ಬಣ್ಣ ಎಷ್ಟು ವರ್ಷಗಳಾದರೂ ಮಾಸುವುದಿಲ್ಲ. ಎಲ್ಲ ಬಣ್ಣದ ಉಡುಪುಗಳಿಗೂ ಹೊಂದುವ ಹವಳ, ಮಿಕ್ಸ್ ಅಂಡ್ ಮ್ಯಾಚ್ ಮಾಡಲೂ ಅತ್ಯಂತ ಸೂಕ್ತವಾದವು. ಹವಳದ ಒಡವೆಯನ್ನು ಬಟ್ಟೆಯಲ್ಲಿ ಸುತ್ತಿಡಬೇಕು. ಬೆವರು, ದೂಳು ತಾಗಿದ್ದರೆ ಶುಭ್ರವಾದ ಬಟ್ಟೆಯಲ್ಲಿ ಒರೆಸಿ. ಹವಳಕ್ಕೆ ಯಾವುದೇ ರಾಸಾಯನಿಕ ತಾಗದಂತೆ ಎಚ್ಚರವಹಿಸಿದರೆ ದೀರ್ಘಕಾಲ ಬಾಳಿಕೆ ಬರುತ್ತದೆ' ಎಂದು ಹೇಳುತ್ತಾರೆ ಚಂದನ್ ಲಾಲ್.

ಕೆಂಪು ಹರಳು, ರೂಬಿ, ಎಮರಾಲ್ಡ್, ಮುತ್ತು ಎಲ್ಲವನ್ನೂ ಸೆಟ್ ಮಾಡಿಸಿ ಇಟ್ಟುಕೊಂಡಿರುವಾಗ ಅತ್ಯಂತ ಆಕರ್ಷಕ ಲುಕ್ ಕೊಡುವ ಹವಳದ ಸೆಟ್ ಇಲ್ಲದಿದ್ದರೆ ಹೇಗೆ? ■

